## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**OS**- 521/2024 **DW**-1

**ದಿಃ 24.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಸ.ಎಂ.ಡಬ್ಲ್ಯೂ ವಕೀಲರಿಂದಃ**

ನಾವು ವಾಸವಾಗಿರುವ ಮೂರುಸಾವಿರಮಠದ ಮನೆಯ ರೇಷನ ಕಾರ್ಡ ಇದೇಯಾ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ಸದರಿ ರೇಷನ ಕಾರ್ಡನಲ್ಲಿ ನನ್ನ ಮತ್ತು ಮಕ್ಕಳ ಹೆಸರು ಇದೆ. ಅವರೆಂದರೆ ರಾಕೇಶ, ಶೋಭಾ ರಾಥೋಡ, ಅಮೀತ, ಶ್ಲೋಕ, ವೀರ, ಪ್ರೀತಿ ಇವರ ಹೆಸರುಗಳಿವೆ. ರೇಷನ ಕಾರ್ಡ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲವೆಂದರೆ ಸರಿ. ನಾವು ಮೂರುಸಾವಿರಮಠದವರ ಕಡೆಯಿಂದ ಮನೆಯನ್ನು ಲೀಸ್ ಗೆ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದು ಆ ಲೀಸ ಡೀಡ್ ನಿಮ್ಮ ಕಡೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆ ಮನೆಯ ಸಿಟಿ ಸರ್ವೆ ಉತಾರ ಕೂಡಾ ಇಲ್ಲ. ಮನೆಯ ಕಂದಾಯವನ್ನು ನಾನೇ ತುಂಬುತ್ತೇನೆ, ಅದರ ರಶೀದಿ ನಿಮ್ಮ ಕಡೆ ಇದೆ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ಸದರಿ ಮನೆ ವಿಸ್ತೀರ್ಣ ಅಗಲ 8 ಅಡಿ ಉದ್ದ 10 ಅಡಿ ಇರುತ್ತದೆ. ಆ ಮನೆಯಲ್ಲಿ ನಾನು ಒಬ್ಬಳೆ ಇರುತ್ತೇನೆ, ಮಕ್ಕಳು ಎಲ್ಲಿ ಇರುತ್ತಾರೆ ಎಂದರೆ ಸಾಕ್ಷಿ ಕೇಶ್ವಾಪೂರದಲ್ಲಿ ಇರುತ್ತಾರೆ ಎನ್ನುತ್ತಾರೆ. ಆ ಮನೆಯ ಉತಾರ ಹಾಗೂ ಲೀಸ ಡೀಡ್ ನನ್ನ ಕಡೆ ಇದೆ ಕೊಟ್ಟರೆ ಹಿಸ್ಸಾ ಹೋಗುತ್ತದೆ ಎಂಬ ಕಾರಣಕ್ಕೆ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ. ವಾದಿಯ ತಂದೆ-ತಾಯಿಗೆ ಕಣ್ಣು ಕಾಣುತ್ತಿಲ್ಲವೆಂದರೆ ಸಾಕ್ಷಿ ಕಾಣುತ್ತವೆ ಎನ್ನುತ್ತಾರೆ. ನ್ಯಾಯಾಲಯಕ್ಕೆ ಮಕ್ಕಳ ಹೆಸರಿನಲ್ಲಿ ಮಾಡಿರುವ ಎಫಡಿ ಸರ್ಟಿಫೀಕೇಟ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎನ್ನುತ್ತಾರೆ. ಯಾವುದೇ ಸರ್ಟಿಫೀಕೇಟ ನ್ಯಾಯಾಲಯಕ್ಕೆ ಕೊಟ್ಟದೆ ಇಲ್ಲದಿದ್ದರು ಕೊಟ್ಟಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮಗ ಮರಣ ಹೊಂದುವ ಮೊದಲು ನನ್ನ ಮಗನೆ ಮಾಡಿದಂತಹ ಎಫಡಿ ಸರ್ಟಿಫೀಕೇಟ ಎಂದರೆ ಸಾಕ್ಷಿ ಅದು ಸರಿ ಅಲ್ಲ ಎನ್ನುತ್ತಾರೆ. ಅವುಗಳನ್ನು ಹಾಜರುಪಡಿಸಿದರೆ ನಿಜ ಸ್ಥಿತಿ ಗೊತ್ತಾಗುತ್ತದೆ ಎಂಬ ಕಾರಣಕ್ಕೆ ನಾನು ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ. ನನ್ನ ಖಾತೆಗೆ ಜಮಾ ಆದ ಹಣದಲ್ಲಿ ಹಾಗೂ ಆಸ್ತಿಯಲ್ಲಿ ಒಟ್ಟು 4 ಭಾಗ ಇದೆ ಎಂದರೆ ಸರಿಯಲ್ಲ. ವಾದಿಗೆ ಬರುವ ಕಾನೂನು ಬದ್ಧವಾದ ಹಿಸ್ಸೆಯಲ್ಲಿ ಕೊಡಬೇಕಾಗುತ್ತದೆ ಎಂದರೆ ಸಾಕ್ಷಿ ಅದು ಸುಳ್ಳು ಎನ್ನುತ್ತಾರೆ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ